ಅವಲೋಕಿಸಲು ಆಗದ ನಾನು ಇಂತಹ ಭರ್ಜರಿ ಪ್ರದರ್ಶನವನ್ನು ಕಿಂಚಿತ್ತೂ ಬೇಸರವಿಲ್ಲದೇ ನೋಡಿ, ಕೈಗೆತ್ತಿಕೊಂಡು ಆನಂದಿಸುತ್ತೇನೆ. ಈಗಿನ ಲೋಹಿಪ್(ಅಂದರೆ, ಸೊಂಟದಿಂದ ಬಲು ಕೆಳಗಿರುವ) ಪ್ಯಾಂಟುಗಳನ್ನು ಧರಿಸುವ ಯುವ ಸಮೂಹವು ತಾವು ಧರಿಸಿರುವ ಒಳಚಡ್ಡಿಗಳ ಬ್ರ್ಯಾಂಡಾವುದು ಎನ್ನುವುದನ್ನು ಧಾಳಾಗಿ ಪ್ರದರ್ಶಿಸುವುದೂ ಇದೇ ಸಂದರ್ಭದಲ್ಲೇ!

ನಾವು ವಿದ್ಯಾರ್ಥಿಗಳಾಗಿದ್ದ ಸಂದರ್ಭದಲ್ಲಿ ಹೀರೋ ಪೆನ್ನನ್ನು ಬಳಸುವುದು ಪ್ರತಿಷ್ಠೆಯ ವಿಷಯವಾಗಿತ್ತು. ಶಾಯಿಯ ಬಳಕೆಯು ಸರ್ವೇ ಸಾಮಾನ್ಯವಾಗಿದ್ದ ಕಾಲವದು. ಆ ಸಮಯದಲ್ಲಿ ಕೆಲವೊಬ್ಬರು ಶಾಯಿಯ ಸಣ್ಣ ಕುಡಿಕೆಗಳನ್ನು ತರುತ್ತಿದ್ದರೆ ಇನ್ನು ಒಬ್ಬಿಬ್ಬರು ತುಂಬಿದ ಅರ್ಧ ಲೀಟರಿನ ಬಾಟಲಿಯನ್ನೇ ತಂದು ತಮ್ಮೆದುರು ಪ್ರತಿಷ್ಠಾಪಿಸಿಕೊಳ್ಳುವುದೂ ಮಾಮೂಲಾಗಿತ್ತು. ಯಾರಾದರೂ ನೋಡಿದರೆ ಅಂತಹವರು ಟನ್ನುಗಟ್ಟಲೇ ಪುಟಗಳಲ್ಲಿ ಉತ್ತರಗಳನ್ನು ಗೀಚಿ ಗೀಚಿ ಬಿಸಾಕುತ್ತಾರೆಂದು ಅನ್ನಿಸಬೇಕು. ಬಹಳಷ್ಟು ಸಲ ಮುಚ್ಚಳ ತೆರೆದಿಟ್ಟ ಕುಡಿಕೆಗಳಿಂದ ಶಾಯಿಯು ಉತ್ತರ ಪತ್ರಿಕೆಗಳ ಮೇಲೆ ಚೆಲ್ಲಿ ಹೆದರಿದವರ ಮೇಲೆ ಹಾವು ಹಾಕಿದಂತೆ ಬೆಚ್ಚಿಬೀಳಿಸುತ್ತಿತ್ತು. ಈಗ ಎಲ್ಲೆಲ್ಲಿಯೂ ಯೂಸ್ ಅಂಡ್ ಥ್ರೋ ಕಾಲವಾಗಿರುವುದರಿಂದ ಬಾಲ್ ಪೆನ್‌ಗಳೇ ರಾರಾಜಿಸುತ್ತಿವೆ. ಆದರೆ ಈ ಬಾಲ್ ಪೆನ್ನುಗಳೂ ಸಮಯ ಕಳೆದಂತೆಲ್ಲಾ ಒಡಲಾಳದಿಂದ ಹರಿಯುವ ಶಾಯಿಯನ್ನು ಮೂತಿಗಳಿಂದ ಕಾರತೊಡಗುತ್ತವೆ. ಆ ಕಾರುವಿಕೆಯನ್ನು ವಿದ್ಯಾರ್ಥಿಗಳು ಒರೆಸುವದು ಪ್ರಶ್ನೆ ಪತ್ರಿಕೆಗಳಿಗೆ ಇಲ್ಲವೇ ಉತ್ತರ ಪತ್ರಿಕೆಯ ಕೊನೆಯ ಪುಟಕ್ಕೆ. ಆ ಕ್ರಿಯೆಯಲ್ಲಿ 'ನವ್ಯ ಕಲೆ'ಯೊಂದು ಸೃಷ್ಟಿಯಾಗುತ್ತದೆ.

ಒಂದೇ ಎರಡೇ? ಪ್ರತೀ ಬಾರಿಯೂ ವಿವಿಧ ಅನುಭವಗಳು, ವಿನೋದಾವಳಿಗಳು. ಹ್ಞಾಂ! ಮರೆತೇ ಬಿಟ್ಟಿದ್ದೆ. ಇಪ್ಪತ್ತು ನಿಮಿಷದ ವಿರಾಮ ದೊರಕಿತ್ತು, ಈಗ ನೋಡಿದರೆ ಅರ್ಧಗಂಟೆ ಮೀರಿದೆ. ಇನ್ನೂ ಜಲಬಾಧೆ ತೀರಿಸಬೇಕು. ರಿಲೀವರ್ ಕಾಯುತ್ತಿರಬಹುದು. ಬರಲೇ?

## ಮನೋಜ ಗೋಡಬೋಲೆ

ಲೇಖಕರು ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯ ಉಜಿರೆಯಲ್ಲಿ ಸ್ನಾತಕೋತ್ತರ ಜೈವಿಕ ತಂತ್ರಜ್ಞಾನದ ಸಹಾಯಕ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ. ಎಸ್ಸಿ ಮತ್ತು ಪಿಎಚ್.ಡಿ. ಪದವಿ ಪಡೆದಿದ್ದಾರೆ. ಕನ್ನಡ ಪತ್ರಿಕೆಗಳಲ್ಲಿ ಸಾಮಾಜಿಕ, ಶಿಕ್ಷಣ, ಪರಿಸರ, ಲಲಿತ ಪ್ರಬಂಧ, ವೈಜ್ಞಾನಿಕ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಪ್ರಕಟವಾಗಿವೆ. ಅಂತರರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ.